**ದಿನಾಂಕಃ 11-12-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ ಅದರಲ್ಲಿ ಬರೆದಿರುವ ವಿಷಯಗಳು ನಾನೇ ಹೇಳಿ ಬರೆಸಿದ್ದೇನೆ. ಸದರಿ ಸಂಗತಿಗಳು ಸತ್ಯದಿಂದ ಕೂಡಿರುತ್ತವೆ.

**ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ ಸಿ ಬಿ ಕೆ ವಕೀಲರಿಂದಃ**

ಅಪಘಾತಕ್ಕೆ ಸಂಬಂಧಿಸಿದ ಪ್ರ.ವ.ವರದಿಯ ದೃಡೀಕೃತ ನಕಲನ್ನು ಕೊಟ್ಟಿದ್ದು ಅದನ್ನು ನಿ ಪಿ -1 ಎಂದು, ಪಿರ್ಯಾದಿಯ ದೃಡೀಕೃತ ನಕಲನ್ನು ಕೊಟ್ಟಿದ್ದು ಅದನ್ನು ನಿ ಪಿ -2 ಎಂದು, ಸ್ಥಳ ಪಂಚನಾಮೆಯ ದೃಡೀಕೃತ ನಕಲನ್ನು ಕೊಟ್ಟಿದ್ದು ಅದನ್ನು ನಿ ಪಿ -3 ಎಂದು, ವಾಹನದ ಜಪ್ತಿ ಪಂಚನಾಮೆ ದೃಡೀಕೃತ ನಕಲನ್ನು ಕೊಟ್ಟಿದ್ದು ಅದನ್ನು ನಿ ಪಿ -4 ಎಂದು, ಐಎಂವಿ ವರದಿಯ ದೃಡೀಕೃತ ನಕಲನ್ನು ಕೊಟ್ಟಿದ್ದು ಅದನ್ನು ನಿ ಪಿ -5 ಎಂದು, ಗಾಯದ ಪ್ರಮಾಣ ಪತ್ರವನ್ನು ಕೊಟ್ಟಿದ್ದು ಅದನ್ನು ನಿ ಪಿ -6 ಎಂದು, ದೋಷಾರೋಪಣೆ ಪಟ್ಟಿಯ ದೃಡೀಕೃತ ನಕಲನ್ನು ಕೊಟ್ಟಿದ್ದು ಅದನ್ನು ನಿ ಪಿ -7 ಎಂದು, ಎಮ್ ಎಲ್ ಸಿ ಯನ್ನು ನಿ ಪಿ -8 ಎಂದು, ಡಿಸ್ಚಾರ್ಜ ಸಮ್ಮರಿಯನ್ನು ನಿ ಪಿ -9 ಎಂದು,ಎರಡು ಬಿಲ್ಲುಗಳನ್ನು ನಿ ಪಿ -10 ಎಂದು, ಒಂದು ಒಪಿಡಿ ಯನ್ನು ನಿ ಪಿ -11 ಎಂದು, ಅಂಗನ್ಯೂನತ ಪ್ರಮಾಣ ಪತ್ರವನ್ನು ಕೊಟ್ಟಿದ್ದು ಅದನ್ನು ನಿ ಪಿ 12 ಎಂದು, ಎರಡು ಎಕ್ಸರೆಗಳನ್ನು ಒಟ್ಟಾಗಿ ನಿ ಪಿ -13 ಎಂದು ಗುರುತಿಸಲಾಯಿತು.

ಅರ್ಜಿದಾರರ ಮೂಲ ಆದಾರ ಕಾರ್ಡ, ಪ್ಯಾನ್ ಕಾರ್ಡ, ಬ್ಯಾಂಕ್ ಪಾಸ್ ಬುಕ್ ಮೂಲ ದಾಖಲೆಗಳ ಜೊತೆ ಅವುಗಳ ನೋಟರಿ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಮೂಲ ದಾಖಲೆಗಳ ಜೊತೆ ಪರಿಶೀಲಿಸಿದ ನಂತರ ಸದರಿ ದಾಖಲೆಗಳು ದಿನ ಬಳಕೆಗೆ ಬೇಕಾಗಿರುವುದರಿಂದ ಅವುಗಳ ನೋಟರಿ ಪ್ರತಿಗಳನ್ನು ನಿ ಪಿ-14 ರಿಂದ ನಿ ಪಿ- 16 ಎಂದು ಗುರುತಿಸಲಾಯಿತು. ಅರ್ಜಿದಾರರ ಮೂಲ ಆದಾರ ಕಾರ್ಡ, ಪ್ಯಾನ್ ಕಾರ್ಡ, ಬ್ಯಾಂಕ್ ಪಾಸ್ ಬುಕ್ ಗಳನ್ನು ಅರ್ಜಿದಾರರಿಗೆ ಹಿಂದುರಿಗಿಸಲಾಯಿತು.

ಅರ್ಜಿಯಲ್ಲಿ ಕೇಳಿದಂತೆ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಪಿ ಕೆ ಎಸ್ ವಕೀಲರಿಂದಃ**

ಅಪಘಾತವು ಶಿಕಾರಿಪುರದ ಹೆಲಿಪ್ಯಾಡ್ ಹತ್ತಿರ ದಿನಾಂಕ 12.05.2024 ರಂದು ಆಗಿರುತ್ತದೆ. ಅಪಘಾತವಾದ ತಕ್ಷಣ ನನ್ನನ್ನು ಶಿಕಾರಿಪುರದ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತಾರೆ. ಆನಂತರ ಶಿವಮೊಗ್ಗದ ಮೆಗ್ಗಾನ ಆಸ್ಪತ್ರೆಗೆ ಹೋಗಿರುತ್ತೇನೆ. ಮೆಗ್ಗಾನ ಆಸ್ಪತ್ರೆಯಲ್ಲಿ 3 ದಿವಸಗಳ ಕಾಲ ದಾಖಲಾಗಿದ್ದೇನು. ನಾನು ಹೊರರೋಗಿಯಾಗಿ ಎಸ್ ಎಸ್ ಐ ಆಸ್ಪತ್ರೆ ದಾವಣೆಗೆರೆಗೆ

ಚಿಕಿತ್ಸೆಗೆ ಹೋಗಿರುತ್ತೇನೆ. ಅಪಘಾತದಿಂದ ನನ್ನ ಬಲಗೈ ಮತ್ತು ಎಡಗಾಲು ಮಂಡಿ , ಹಣೆಗೆ ಗಾಯವಾಗಿತ್ತು. ಅಲ್ಲಿ ಪಿ ಒ ಪಿ ಬ್ಯಾಂಡೇಜ್ ಹಾಕಿದ್ದರು. ಸಂಪೂರ್ಣ ಗುಣಮುಖನಾಗಿಲ್ಲ ಆಗಾಗ ನಾನು ಆಸ್ಪತ್ರೆಗೆ ಚಿಕಿತ್ಸೆ ಪಡೆದುಕೊಳ್ಳಲು ಹೋಗಿರುತ್ತೇನೆ. ಸರ್ಕಾರಿ ಆಸ್ಪತ್ರೆ ಮತ್ತು ಮೆಗ್ಗಾನ ಆಸ್ಪತ್ರೆಯಲ್ಲಿ ಉಚಿತವಾಗಿ ಚಿಕಿತ್ಸೆ ನೀಡಿರುತ್ತಾರೆ ಎಂದರೆ ಸರಿ. ನಾನು ಕೂಲಿ ಕೆಲಸ ಮಾಡುತ್ತಿದ್ದೇನು. ನನಗೆ 600–700 ರೂ. ದಿನನಿತ್ಯ ದುಡಿಯುತ್ತಿದ್ದೇನೆ. ಅರ್ಜಿ ಹಾಕುವ ಕಾಲಕ್ಕೆ ನಾನು ವಕೀಲರಿಗೆ ಎಲ್ಲಾ ಮಾಹಿತಿ ಕೊಟ್ಟಿರುತ್ತೇನೆ. ನನಗೆ ಚಿಕಿತ್ಸ ನೀಡಿದ ವೈದ್ಯರೇ ಅಂಗನ್ಯೂನತೆ ಪ್ರಮಾಣಪತ್ರವನ್ನು ನೀಡಿಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಸಿಗಲಿ ಎಂದು ಹೆಚ್ಚಿನ ಪ್ರಮಾಣದ ಸುಳ್ಳು ಅಂಗನ್ಯೂನತೆ ಪ್ರಮಾಣ ಪತ್ರ ತೆಗೆದುಕೊಂಡು ಬಂದಿದ್ದೇನೆ ಎಂದರೆ ಸರಿಯಲ್ಲ. ನಾನು ಸಂಪೂರ್ಣವಾಗಿ ಗುಣಮುಖ ಹೊಂದಿದ್ದು ಅಪಘಾತಕ್ಕಿಂತ ಮೊದಲು ಹೇಗೆ ಕೆಲಸ ಮಾಡುತ್ತಿದ್ದೇನು ಈಗಲೂ ಹಾಗೆ ದುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ._

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/–

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.